# ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

## ಅಧಿಸೂಚನೆ

ಸಂಖ್ಯೆ:ವೈ/01/17/1550,ಬೆಂಗಳೂರು, ದಿನಾಂಕ: 15.12.2017

ಪೀಠಿಕೆ:

ಆಯೋಗವು, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಮುಕ್ತಮಾರ್ಗಕ್ಕಾಗಿ ನಿಬಂಧನೆಗಳು ಮತ್ತು ಷರತ್ತುಗಳು) ವಿನಿಮಯಗಳು, 2004ಕ್ಕೆ ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಾಗಿ ವಿದ್ಯುಚ್ಛಕ್ತಿ ಅಧಿನಿಯಮ, 2003ರ ಪರಿಚ್ಛೇದ 1 & 1ರ ಉಪ-ಪರಿಚ್ಛೇದ (3)ರ ಅಡಿಯಲ್ಲಿ ಅಗತ್ಯಪಡಿಸಲಾದಂತೆ ಭಾಗೀದಾರರಿಂದ ಅಭಿಪ್ರಾಯಗಳನ್ನು, ಅನಿಸಿಕೆಗಳನ್ನು ಮತ್ತು ಸಲಹೆಗಳನ್ನು ಆಹ್ವಾನಿಸಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ(ಮುಕ್ತಮಾರ್ಗಕ್ಕಾಗಿ ನಿಬಂಧನೆಗಳು ಮತ್ತು ಷರತ್ತುಗಳು) (ನಾಲ್ಕನೆಯ ತಿದ್ದುಪಡಿ) ವಿನಿಯಮಗಳು 2017ರ ಕರಡನ್ನು ಪ್ರಕಟಿಸಿತ್ತು. ಆಯೋಗವು ದಿನಾಂಕ:25.01.2017ರಂದು ಈ ವಿಷಯದಲ್ಲಿ ಸಾರ್ವಜನಿಕ ವಿಚಾರಣೆಯನ್ನು ಸಹ ನಡೆಸಿತ್ತು. ಈ ವಿಷಯದಲ್ಲಿ ಭಾಗೀದಾರರ ಅನಿಸಿಕೆಗಳು/ ಅಭಿಪ್ರಾಯಗಳು/ ಸಲಹೆಗಳನ್ನು ಪರಿಗಣಿಸಿದ ತರುವಾಯ ಆಯೋಗವು ವಿದ್ಯುಚ್ಛಕ್ತಿ ಅಧಿನಿಯಮ 2003ರ ಪರಿಚ್ಛೇದ 181ರ ಉಪ-ಪರಿಚ್ಛೇದ (1)ರ ಜೊತೆಗೆ ಓದಲಾದ ಪರಿಚ್ಛೇದಗಳು 39(2) (ಡಿ), 40 (ಸಿ), 42(2), 42(3), 42(4), 86(1) (ಎ) ಮತ್ತು 86(1) (ಸಿ)ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರಿಗಳನ್ನು ಚಲಾಯಿಸಿ ಈ ಮೂಲಕ ವಿನಿಮಯಗಳನ್ನು ಮಾಡಿದೆ, ಎಂದರೆ

## <u>ವಿನಿಮಯಗಳು</u>

1. ಶೀರ್ಷಿಕೆ ಮತ್ತು ಪ್ರಾರಂಭ-
   (i) ಈ ವಿನಿಮಯಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಮುಕ್ತಮಾರ್ಗಕ್ಕಾಗಿ ನಿಬಂಧನೆಗಳು ಮತ್ತು ಷರತ್ತುಗಳು) (ನಾಲ್ಕನೆಯ ತಿದ್ದುಪಡಿ) ವಿನಿಯಮಗಳು 2017 ಎಂದು ಕರೆಯಬಹುದಾಗಿದೆ.

   (ii) ಅವುಗಳು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಮುಕ್ತಮಾರ್ಗಕ್ಕಾಗಿ ನಿಬಂಧನೆಗಳು ಮತ್ತು ಷರತ್ತುಗಳು) ವಿನಿಮಯಗಳು, 2004ರಲ್ಲಿನ ವಿನಿಮಯ 11ಕ್ಕೆ, ಈ ಕೆಳಗಿನದ್ದನ್ನು ಪ್ರತಿಸ್ಥಾಪಿಸತಕ್ಕದ್ದು, ಎಂದರೆ-

“(iv) ಈ ಕೆಳಗಿನ ಸೂತ್ರದ ಪ್ರಕಾರ ಕಾಲಕಾಲಕ್ಕೆ ಆಯೋಗವು ನಿರ್ಧರಣೆ ಮಾಡಿದ ಸರ್ಚಾರ್ಜ್‌ನ್ನು ಮುಕ್ತ ಮಾರ್ಗ ಗ್ರಾಹಕ ಪಾವತಿಸಲು ಬಾಧ್ಯನಾಗಿತಕ್ಕದ್ದು.

ಎಸ್=ಟಿ–[(ಸಿ/ (1–ಎಲ್/100) +ಡಿ+ಆರ್] ಅಂದರೆ–

ಎಸ್ ಸರ್ಚಾರ್ಜ್

ಟಿ ನವೀಕರಿಸಬಹುದಾದ ಖರೀದಿ ಭಾದ್ಯತೆ ಪ್ರತಿಬಿಂಭಿಸುವುದನ್ನು ಒಳಗೊಂಡು ಸಂಬಂಧಿಸಿದ ಗ್ರಾಹಕರು ಪಾವತಿಸಬೇಕಾದ ದರ.

ಸಿ ನವೀಕರಿಸಬಹುದಾದ ಖರೀದಿ ಭಾದ್ಯತೆ ಸಾಧಿಸುವುದನ್ನು ಒಳಗೊಂಡು ಪರವಾನಿಗೆದಾರನ ಪ್ರತಿ ಯೂನಿಟ್‌ಗೆ ವಿದ್ಯುತ್ ಖರೀದಿಯ ವೈಟೆಡ್ ಸರಾಸರಿ ವೆಚ್ಚ ಡಿ ಸಂಬಂಧಿಸಿದ ವೋಲ್ಟೇಜ್ ಹಂತಕ್ಕೆ ಅನ್ವಯವಾಗುವ ಒಟ್ಟಾರೆ ಪ್ರಸರಣ ವಿತರಣ ಮತ್ತು ವೀಲಿಂಗ್ ಶುಲ್ಕ.

ಎಲ್ ಸಂಬಂಧಿಸಿದ ವೋಲ್ಟೇಜ್ ಹಂತಕ್ಕೆ ಅನ್ವಯವಾಗುವ ಶೇಕಡವಾರು ನಂತೆ ವ್ಯಕ್ತಪಡಿಸಿದ ಒಟ್ಟಾರೆ ಪ್ರಸರಣ, ವಿತರಣ ಮತ್ತು ವಾಣಿಜ್ಯ ನಷ್ಟಗಳು.

ಆರ್ ನಿಯಂತ್ರಕ ಆಸ್ತಿಗಳ ಮುಂದ್ಯೊಯಲು ಪ್ರತಿ ಯೂನಿಟ್ ವೆಚ್ಚ ಪರಂತು, ಸರ್ಚಾರ್ಜ್, ಮುಕ್ತ ಮಾರ್ಗ ಕೋರುವ ಗ್ರಾಹಕನ ಪ್ರವರ್ಗಕ್ಕೆ ಅನ್ವಯವಾಗುವ ದರದ ಶೇ.20 ರಷ್ಟ ನ್ನು ಮೀರತಕ್ಕದ್ದಲ್ಲ”.

ಆಯೋಗದಿಂದ ಅನುಮೋದನೆಗೊಂಡಿದೆ.

ಸಹಿ/–

ಕಾರ್ಯದರ್ಶಿ

# ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

## ಅಧಿಸೂಚನೆ

ಅಧಿಸೂಚನೆ ಸಂಖ್ಯೆ:/ವೈ/01/17/1551, ಬೆಂಗಳೂರು, ದಿನಾಂಕ:15.12.2017

**ಪೀಠಿಕೆ**

ಆಯೋಗವು, ಕವಿನಿಆ (ವಿತರಣೆ ಹಾಗೂ ವಿದ್ಯುಚ್ಛಕ್ತಿ ಚಿಲ್ಲರೆ ಮಾರಾಟದ ದರ ನಿರ್ಧರಣೆಗಾಗಿ ನಿಬಂಧನೆ ಮತ್ತು ಷರತ್ತುಗಳು) ವಿನಿಯಮಗಳು, 2006ಕ್ಕೆ ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಾಗಿ, ವಿದ್ಯುಚ್ಛಕ್ತಿ ಅಧಿನಿಯಮ 2003ರ ಪರಿಚ್ಛೇದ181ರ ಉಪಪರಿಚ್ಛೇದ (3)ರ ಅಡಿಯಲ್ಲಿ, ಅಗತ್ಯ ಪಡಿಸಲಾದಂತೆ, ಭಾಗೀದಾರರಿಂದ, ಅಭಿಪ್ರಾಯಗಳನ್ನು, ಅನಿಸಿಕೆಗಳನ್ನು ಮತ್ತು ಸಲಹೆಗಳನ್ನು ಆಹ್ವಾನಿಸಿ, ಕವಿನಿಆ (ವಿತರಣೆ ಹಾಗೂ ವಿದ್ಯುತ್‌ನ ಚಿಲ್ಲರೆ ಮಾರಾಟ ದರ ನಿರ್ಧರಣೆಗಾಗಿ ನಿಬಂಧನೆ ಮತ್ತು ಷರತ್ತುಗಳು (ಮೂರನೆಯ ತಿದ್ದುಪಡಿ) ವಿನಿಯಮಗಳು 2017ರ ಕರಡನ್ನು ಪ್ರಕಟಿಸಿತ್ತು. ಆಯೋಗವು, ದಿನಾಂಕ:29.11.2017ರಂದು ಈ ವಿಷಯದಲ್ಲಿ ಸಾರ್ವಜನಿಕ ವಿಚಾರಣೆಯನ್ನೂ ಸಹ ನಡೆಸಿತ್ತು. ಈ ವಿಷಯದಲ್ಲಿ ಭಾಗೀದಾರರ ಅನಿಸಿಕೆಗಳು/ ಅಭಿಪ್ರಾಯಗಳು / ಸಲಹೆಗಳನ್ನು ಪರಿಗಣಿಸಿದ ತರುವಾಯ, ಆಯೋಗವು, ವಿದ್ಯುಚ್ಛಕ್ತಿ ಅಧಿನಿಯಮ 2003ರ ಪರಿಚ್ಛೇದ 181ರ ಉಪಪರಿಚ್ಛೇದ(1)ರ ಜೊತೆಗೆ ಓದಲಾದ ಪರಿಚ್ಛೇದ 61ರ ಅಡಿಯಲ್ಲಿ ಹಾಗೂ ಈ ಸಂಬಂಧ ಅದಕ್ಕೆ ಪ್ರದತ್ತವಾದ ಇತರ ಎಲ್ಲಾ ಅಧಿಕಾರಗಳನ್ನು ಚಲಾಯಿಸಿ, ಈ ಮೂಲಕ ಕೆಳಗೆ ತಿಳಿಸಿದಂತೆ, ವಿನಿಯಮಗಳನ್ನು ಮಾಡಿದೆ. ಎಂದರೆ,-

**ವಿನಿಯಮಗಳು:**

1. ಶೀರ್ಷಿಕೆ ಮತ್ತು ಪ್ರಾರಂಭ.-
   i) ಈ ವಿನಿಯಮಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ವಿತರಣೆ ಹಾಗೂ ವಿದ್ಯುತ್‌ನ ಚಿಲ್ಲರೆ ಮಾರಾಟ ದರ ನಿರ್ಧರಣೆಗಾಗಿ ನಿಬಂಧನೆ ಮತ್ತು ಷರತ್ತುಗಳು) (ಮೂರನೆಯ ತಿದ್ದುಪಡಿ) ವಿನಿಯಮಗಳು, 2017, ಎಂದು ಕರೆಯಬಹುದಾಗಿದೆ.
   ii) ಅವುಗಳು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ವಿತರಣೆ ಹಾಗೂ ವಿದ್ಯುತ್‌ನ ಚಿಲ್ಲರೆ ಮಾರಾಟ ದರ ನಿರ್ಧರಣೆಗಾಗಿ ನಿಬಂಧನೆ ಮತ್ತು ಷರತ್ತುಗಳು) ವಿನಿಯಮಗಳು 2006ರಲ್ಲಿನ ವಿನಿಯಮ 4.1ಕ್ಕೆ, ಈ ಕೆಳಗಿನದ್ದನ್ನು ಪ್ರತಿ ಸ್ಥಾಪಿಸತಕ್ಕದ್ದು, ಎಂದರೆ.-

"4.1 ಸರ್ಚಾರ್ಜ್:

ಪ್ರಸರಣ ಪರವಾನಿಗೆದಾರನ ಪ್ರಸರಣ ಜಾಲ ಮತ್ತು ವಿತರಣಾ ಪರವಾನಿಗೆದಾರನ ವಿತರಣಾ ಜಾಲದ ಮುಖಾಂತರ ಮುಕ್ತಮಾರ್ಗ ಅನುಮತಿ ಪಡೆದ ಗ್ರಾಹಕರು, ಯಾವ ವಿತರಣಾ ಪ್ರದೇಶದಲ್ಲಿ ಗ್ರಾಹಕನಾಗಿರುವನೋ ಅಂತಹ ವಿತರಣಾ ಪರವಾನಿಗೆದಾರನಿಗೆ ಈ ಕೆಳಗೆ ತೋರಿಸಿದ ಸೂತ್ರದ ಪ್ರಕಾರ ಕ್ರಾಸ್ ಸಬ್ಸಿಡಿ ಸರ್ಚಾರ್ಜ್‌ನ್ನು ಪಾವತಿಸತಕ್ಕದ್ದು:

ಎಸ್=ಟಿ–[ಸಿ/(1–ಎಲ್/100)+ಡಿ+ಆರ್]

ಅಂದರೆ,

ಎಸ್–ಸರ್ಚಾರ್ಜ್.

ಟಿ – ನವೀಕರಿಸಬಹುದಾದ ಖರೀದಿ ಭಾದ್ಯತೆ ಪ್ರತಿಬಿಂಬಿಸುವುದನ್ನು ಒಳಗೊಂಡುಸಂಬಂಧಿಸಿದ ಗ್ರಾಹಕರು ಪಾವತಿಸಬೇಕಾದ ದರ

ಸಿ – ನವೀಕರಿಸಬಹುದಾದ ಖರೀದಿ ಭಾದ್ಯತೆ ಸಾಧಿಸುವುದನ್ನು ಒಳಗೊಂಡು, ಪರವಾನಿಗೆದಾರನ ಪ್ರತಿ ಯೂನಿಟಿಗೆ ವಿದ್ಯುತ್ ಖರೀದಿಯ ವೈಟೆಡ್ ಸರಾಸರಿ ವೆಚ್ಚ.

ಡಿ – ಸಂಬಂಧಿಸಿದ ವೋಲ್ಟೇಜ್ ಹಂತಕ್ಕೆ ಅನ್ವಯವಾಗುವ ಒಟ್ಟಾರೆ ಪ್ರಸರಣ, ವಿತರಣ ಮತ್ತು ವೀಲಿಂಗ್ ಶುಲ್ಕ.

ಎಲ್ – ಸಂಬಂಧಿಸಿದ ವೋಲ್ಟೇಜ್ ಹಂತಕ್ಕೆ ಅನ್ವಯವಾಗುವ ಶೇಕಡಾವರು ಆಗಿ ವ್ಯಕ್ತಪಡಿಸಿದ ಒಟ್ಟಾರೆ ಪ್ರಸರಣ, ವಿತರಣ ಮತ್ತು ವಾಣಿಜ್ಯ ನಷ್ಟಗಳು.

ಆರ್ – ನಿಯಂತ್ರಕ ಆಸ್ತಿಗಳ ಮುಂದೊಯ್ಯಲು ಪ್ರತಿ ಯೂನಿಟ್‌ನ ತಗಲುವ ವೆಚ್ಚ

ಪರಂತು, ಸರ್ಚಾರ್ಜ್, ಮುಕ್ತ ಮಾರ್ಗ ಕೋರುವ ಗ್ರಾಹಕನ ಪ್ರವರ್ಗಕ್ಕೆ ಅನ್ವಯವಾಗುವ ದರದ ಶೇ. 20ರಷ್ಟನ್ನು ಮೀರತಕ್ಕದ್ದಲ್ಲ.

ಆಯೋಗದಿಂದ ಅನುಮೋದನೆಗೊಂಡಿದೆ

ಸಹಿ/–

ಕಾರ್ಯದರ್ಶಿ